C.R.P.67

Form No.4 (Civil)
Deposition Sheets
(R.P.No.57)

# 6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

## ಎಸ್ ಸಿ ಸಂಖ್ಯೆ: 296/2018

**ಪ್ರಾಸಾ.23 ಚಾಸಾ.32**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಮಲ್ಲಿಕಾರ್ಜುನ ಬಾರದಂಡಿ |
| **ತಂದೆ ಹೆಸರು** | : | ಯಲ್ಲಪ್ಪಾ |
| **ವಯಸ್ಸು** | : | 40 ವರ್ಷಗಳು |
| **ಉದ್ಯೋಗ** | : | ಎಸ್.ಪಿ. ಇಂಟರ್ ಲೆಜನ್ಸ್ ಬ್ರ್ಯಾಂಚ್ |
| **ವಾಸ** | : | ಬೆಂಗಳೂರು |

## ಪ್ರಮಾಣ ವಚನ ಬೋಧಿಸಿದ ದಿನಾಂಕ: 04.06.2022

## ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು ದಿನಾಂಕ 08.05.2017 ರಿಂದ ದಿನಾಂಕ 27.01.2019 ರವರೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಡಿಷನಲ್ ಎಸ್.ಪಿ. ಆಗಿ ಕರ್ತವ್ಯ ನಿವರ್ಹಿಸಿರುತ್ತೇನೆ. ನಂದಗುಡಿ ಪೊಲೀಸ್ ಠಾಣೆ ಬೆಂಗಳೂರು ಗ್ರಾಮಂತರ ಜಿಲ್ಲೆಯ ವ್ಯಾಪ್ತಿಗೆ ಬರುತ್ತದೆ.

2. ದಿನಾಂಕ 09.11.2017 ರಂದು ಡಿ.ಕೆ.ನಾರಾಯಣಪ್ಪ ರವರು ಎಸ್.ಪಿ. ಕಛೇರಿಗೆ ಬಂದು ಒಂದು ಅರ್ಜಿಯನ್ನು ಸಲ್ಲಿಸಿದರು. ಸದರಿ ಅರ್ಜಿಯಲ್ಲಿ ರಮೇಶ್ ಮತ್ತು ಕವಿತಾ ಎನ್ನುವವರು ನಮ್ಮ ಜಮೀನಿನಲ್ಲಿ ಡಾಬಾ ಇಟ್ಟುಕೊಂಡು ನಡಿಸುತ್ತಿದ್ದಾರೆ , ನಾವು ಕೇಳಲು

ಹೋದಾಗ ನಮಗೆ ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಹೇಳಿದ್ದರು. ಇದಕ್ಕೆ ಸಂಬಂಧಪಟ್ಟಂತೆ ನಾನು ದಿನಾಂಕ 11.11.2017 ರಂದು ಅರ್ಜಿದಾರರಾದ ಡಿ.ಕೆ.ನಾರಾಯಣಪ್ಪ, ಕವಿತಾ ಮತ್ತು ರಮೇಶ್ ರವರನ್ನು ನನ್ನ ಕಛೇರಿಗೆ ಕರೆಸಿ ಅರ್ಜಿಯಲ್ಲಿ ಹೇಳಿದ ವಿಚಾರದ ಬಗ್ಗೆ ವಿಚಾರಣೆ ಮಾಡಿದೆ. ಆಗ ಕವಿತಾ ಮತ್ತು ರಮೇಶ್ ನಮ್ಮ ಬಳಿ ಕೆಲವು ದಾಖಲಾತಿಗಳು ಇದ್ದಾವೆ, ನಾವು ಅವುಗಳನ್ನು ನಿಮ್ಮ ಮುಂದೆ ಸಲ್ಲಿಸುತ್ತೇವೆ ಎಂದು ತಿಳಿಸಿದ್ದರು ಮತ್ತು ಅರ್ಜಿಯಲ್ಲಿ ಹೇಳಿದ ಹಾಗೇ ನಾವು ನಾರಾಯಣಪ್ಪಗೆ ಹೊಡೆಯುದು, ಬಡೆಯುವುದು ಮಾಡಿರುವುದಿಲ್ಲ ಎಂದು ತಿಳಿಸಿದರು. ಅದಾದ ನಂತರ ಮುಂದಿನ ವಿಚಾರಣೆಗಾಗಿ ಅರ್ಜಿಯನ್ನು ಪಿ.ಎಸ್.ಐ ನಂದಗುಡಿ ಪೊಲೀಸ್ ಠಾಣೆಯವರಿಗೆ ಹಸ್ತಾಂತರಿಸಿರುತ್ತೇನೆ. ಅದಾದ ನಂತರ ನಂದಗುಡಿ ಪೊಲೀಸ್ ಠಾಣೆಯವರು ಸದರಿ ಅರ್ಜಿಗೆ ಸಂಬಂಧಪಟಟಂತೆ ನನಗೆ ವರದಿಯನ್ನು ಸಲ್ಲಿಸಿರುತ್ತಾರೆ. ನಂದಗುಡಿ ಪೊಲೀಸ್ ಠಾಣೆಯವರು ನೀಡಿದ ವರದಿಯನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ವರದಿಯ ದೃಢೀಕೃತ ನಕಲನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ-23 ಎಂದು ಗುರುತಿಸಲಾಯಿತು. ನಾನು ಈ ಕೇಸಿಗೆ ಸಂಬಂಧಪಟ್ಟಂತೆ ಹೇಳಿಕೆಯನ್ನು ನೀಡಿರುತ್ತೇನೆ.

**<u>ಪಾಟೀ ಸವಾಲುಃ ಶ್ರೀ ಎಮ್‌ಪಿ ವಕೀಲರಿಂದ ಆರೋಪಿತರ ಪರವಾಗಿಃ</u>**

ನಾರಾಯಣಪ್ಪರವರು ಕೊಟ್ಟಿರುವ ಅರ್ಜಿಯಲ್ಲಿ ಕವಿತಾ ಡಾಬಾವನ್ನು ಕವಿತಾ ಮತ್ತು ರಮೇಶ್ ನಡೆಸುತ್ತಿರುತ್ತಾರೆ ಎಂದು ಹೇಳಿರುವುದಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಅರ್ಜಿಯಲ್ಲಿ ತಿಳಿಸಿರುವ ಜಮೀನಿನ ಮೇಲೆ ಸಿವಿಲ್ ವ್ಯಾಜ್ಯಗಳು ನಡೆಯುತ್ತಿದ್ದವು ಎಂದರೆ ಸಾಕ್ಷಿಯು ಕವಿತಾ ಮತ್ತು ರಮೇಶ್ ದಾಖಲಾತಿಗಳನ್ನು ಸಲ್ಲಿಸುತ್ತೇವೆ ಎಂದು ಹೇಳಿದ್ದರು ಆದರೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಕವಿತಾ ಮತ್ತು ರಮೇಶ್ ಮೇಲೆ ಚಾಸಾ-34 ರವರು ಹೊಸಕೋಟೆ ಪೊಲೀಸ್

ಠಾಣೆಯಲ್ಲಿ ಕಂಪ್ಲೇಟ್ ನೀಡಿರುತ್ತಾರೆ ಹಾಗೂ ಅವರ ವಿರುದ್ಧ ಸಿವಿಲ್ ವ್ಯಾಜ್ಯವನ್ನು ಹೂಡಿರುತ್ತಾರೆ, ಅವೆರಡು ಪ್ರಕರಣಗಳು ನ್ಯಾಯಾಲಯದ ಮುಂದೆ ನಡೆಯುತ್ತಿರುತ್ತವೆ ಎಂದರೆ ಆ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ಸದರಿ ಅರ್ಜಿಯನ್ನು ಸ್ವೀಕರಿಸಿದ ಒಂದು ತಿಂಗಳು ನಂತರ ನಾನು ನಂದಗುಡಿ ಪೊಲೀಸ್ ಠಾಣೆಯವರಿಗೆ ಸದರಿ ಅರ್ಜಿಯನ್ನು ವಿಚಾರಣೆ ಮಾಡಲು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿ ಸ್ವೀಕರಿಸಿದ ಮೇಲೆ ನಾನು ಸ್ಥಳಕ್ಕೆ ಹೋಗಿ ಪರಿಶೀಲಿಸಿ ಮತ್ತು ವಿಚಾರಣೆ ಮಾಡಿರುವುದಿಲ್ಲ . ನಾನು ಈ ಕೇಸಿಗೆ ಸಂಬಂಧಪಟ್ಟಂತೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ ನಾನು ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.